ಮತ್ತು ಸಂಸ್ಕರಣ ಘಟಕಗಳನ್ನು ಉತ್ತೇಜಿಸಿ ಖನಿಜ ಮೌಲ್ಯವನ್ನು ಹೆಚ್ಚಿಸುವುದು ಹಾಗೂ ರಫ್ತಿಗೆ ಉತ್ತೇಜನ ನೀಡುವುದು ಮತ್ತು ಗಣಿಗಾರಿಕಾ ವಲಯಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದಲ್ಲದೆ ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಅಳವಡಿಸುವ ಮುಖ್ಯ ಉದ್ದೇಶಗಳನ್ನು ಹೊಂದಿರುತ್ತದೆ.

ಈ) ಇಲ್ಲ.

ಉ) ಅನ್ವಯಿಸುವುದಿಲ್ಲ.

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಹಾಯಧನ ಬಿಡುಗಡೆ

4727 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಈವರೆಗೆ ನೀಡಿರುವ ಹಾಗೂ ನೀಡಬೇಕಾಗಿರುವ ಸಹಾಯಧನ/ಸಬ್ಸಿಡಿ ಎಷ್ಟು? (ಪ್ರತ್ಯೇಕ ವಿವರಗಳನ್ನು ನೀಡುವುದು)

ಆ) ಬಾಕಿ ನೀಡಬೇಕಾಗಿರುವ ಸಹಾಯಧನವನ್ನು ಎಂದು ಪಾವತಿ ಮಾಡಲಾಗುವುದು?

ಇ) ಶೀಘ್ರ ಸಹಾಯಧನ ಬಿಡುಗಡೆ ಮಾಡುವ ಬಗೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಆರ್. ಕಾಶ್ಯಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

1. ಸಹಾಯಧನ ಸಾಮಾನ್ಯ ವರ್ಗಕ್ಕೆ :

ಶೇಕಡ 100 ಡಿಸೆಂಬರ್ 1998ರವರೆಗೆ

ಶೇಕಡ 50 ಫೆಬ್ರವರಿ 1999ರವರೆಗೆ

ವಿಶೇಷ ವರ್ಗಕ್ಕೆ :

ಶೇಕಡ 50 ಜೂನ್ 1999ರವರೆಗೆ

ಶೇಕಡ 100 ಡಿಸೆಂಬರ್ 1999ರವರೆಗೆ ನೀಡಲಾಗಿದೆ.

ಜೂನ್ 2000 ಅಂತ್ಯದವರೆಗೆ ಸಹಾಯಧನ ಬಿಡುಗಡೆಯಾಗ-

ಬೇಕಾದ ಘಟಕದ ಸಂಖ್ಯೆ : 9004

ಒಟ್ಟು **ರೂ. 23,841.16 ಲಕ್ಷಗಳು.**

ಜಿಲ್ಲಾವಾರು ವಿವರಣೆ ಲಗತ್ತಿಸಲಾಗಿದೆ.

2. ಆಯುವ್ಯಯದಲ್ಲಿ ಒದಗಿಸುವ ಅನುದಾನವನ್ನಾಧರಿಸಿ, ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.

3. ಸಹಾಯಧನವನ್ನು ಆದಷ್ಟು ಶೀಘ್ರವಾಗಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

DISRTRICT WISE INVESTMENT SUBSIDY PENDENCY AVAILABLE AS ON 30.6.2000

Sl. No.	Name of the District	Balance No. of units	Amount (Rs. in lacs)	Percentage Amt. Pendency
1	Dakshina Kannada	520	1352.23	5.67
2	Bellary	281	872.06	3.66
3	Mercara	81	267.70	1.12
4	Shimoga	196	467.13	1.96
5	Hassan	365	570.39	2.4
**6	Mandya	153	325.59	1.37
7	Raichur	134	443.12	1.86
**8	Dharwad	542	1252.91	5.26
**9	Bangalore(Urban)	776	4447.00	18.65
**10	Mysore	368	1254.58	5.26
**11	Tumkur	522	1262.85	5.3
**12	Chickmagalur	164	400.26	1.68
**13	Gulbarga	181	607.17	2.55
*14	Belgaum	751	1279.52	5.37
15	Chitradurga	230	452.95	1.9
**16	Kolar	693	2017.82	8.46
*17	Bijapur	263	519.14	2.18
**18	Bangalore (Rural)	967	2394.12	10.05
19	Bidar	303	357.35	1.5
20	Karwar	535	940.10	4
**21	Davanagere	105	331.86	1.4
22	Chamarajnagar	150	292.10	1.23
**23	Haveri	79.0	111.82	0.5

Sl. No.	Name of the District	Balance No.of units	Amount (Rs.in lacs)	Percentage Amt.Pendency
24	Gadag	144	151.39	0.64
**25	Koppal	83	399.25	1.68
26	Udupi	301	849.41	3.56
27	Bagalkot	117	221.34	0.93
	Total	**9004**	**23841.16**	

* As on 31.5.2000

** As on 31.3.2000

ಶೇಕಡ 18ರ ಅನುದಾನ

4728 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಡ್ಯ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಇಲಾಖೆಗಳಲ್ಲಿ ಮತ್ತು ಸ್ಥಳೀಯ ಸಂಸ್ಥೆಯಲ್ಲಿ ಮೀಸಲಾಗಿಟ್ಟಿರುವ ಶೇ. 18ರ ಅನುದಾನ ಮೊತ್ತ ಎಷ್ಟು?*

ಆ) *ಕಳೆದ ಮೂರು ವರ್ಷಗಳಿಂದ ಖರ್ಚು ಮಾಡಿರುವ ಹಣವೆಷ್ಟು?*

ಇ) *ರಾಜ್ಯದ ಎಸ್.ಸಿ/ಎಸ್.ಟಿ. ಮತ್ತು ಬಿ.ಸಿ.ಎಂ ಹಾಸ್ಟೆಲ್‌ಗಳಲ್ಲಿ ಸಲಹಾ ಸಮಿತಿ ರಚಿಸುವ ಉದ್ದೇಶ, ಸರ್ಕಾರಕ್ಕಿದೆಯೇ?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಮಂಡ್ಯ ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆಯ ಜಿಲ್ಲಾ ವಲಯದಡಿ ಕಳೆದ 3 ವರ್ಷಗಳಲ್ಲಿ ವಿವಿಧ ಇಲಾಖೆಗಳಲ್ಲಿ ಒದಗಿಸಿದ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಶೇ. ೧೮ರಡಿಯಲ್ಲಿ ಮೀಸಲಿಟ್ಟಿರುವ ಅನುದಾನದ ವಿವರ ಈ ಕೆಳಕಂಡಂತಿದೆ:

ಒದಗಿಸಿದ ಹಣ *(ರೂ. ಲಕ್ಷಗಳಲ್ಲಿ)*

ಕ್ರ. ಸಂ.	ವರ್ಷ	ವಿವಿಧ ಇಲಾಖೆಗಳು	ಸ್ಥಳೀಯ ಸಂಸ್ಥೆಗಳು
1)	1997-98	154.74	41.29
2)	1998-99	172.52	49.79
3)	1999-2000	161.52	52.54